3. ದೊಡ್ಡರಾಯಪೇಟೆ–ಆಲೂರು ಕಾಗಲವಾಡಿ ರಸ್ತೆ ಸರಪಳಿ 5.20 ರಿಂದ 10.40 ಕಿಮೀ.ನ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ–ಅಂದಾಜು ಮೊತ್ತ ರೂ.10.00 ಲಕ್ಷ.

4. ಮುಡಲ ಅಗ್ರಹಾರ–ದೇಮಹಳ್ಳಿ–ಕಮರವಾಡಿ ವಯಾ ಜಿಎಸ್‌ಸಿ ರಸ್ತೆ ಸರಪಳಿ 5.00 ರಿಂದ 7.00 ಕಿಮೀ.ವರೆಗೆ ರಸ್ತೆ ಆಯ್ದಭಾಗಗಳಲ್ಲಿ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ–ಅಂದಾಜು ಮೊತ್ತ ರೂ.5.00ಲಕ್ಷ.

5. ಪಣ್ಯದಹುಂಡಿ–ದಾಸನೂರ–ಉಮ್ಮತ್ತೂರು–ಆಲ್ಬೂರು ರಸ್ತೆ ಸರಪಳಿ 10.50 ರಿಂದ 22.50 ಕಿಮೀ.ವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ–ಅಂದಾಜು ಮೊತ್ತ ರೂ.5.00 ಲಕ್ಷ: ಒಟ್ಟು ರೂ.65.00 ಲಕ್ಷ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

199 (66) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಛೇರಿಯನ್ನು ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿ ತೆರೆಯುವ ಉದ್ದೇಶ ಇದೆಯೇ;

ಆ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

200 (67) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಎಲ್ಲಾ ಸಹಕಾರ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಎಸ್.ಸಿ, ಎಸ್.ಟಿ, ಬಿ.ಸಿ.ಎಂ.ಎ, ಮತ್ತು ಬಿ.ಸಿ.ಎಂ ಬಿ, ಮಹಿಳೆಯರಿಗೆ ನೀಡಲಾಗುತ್ತಿದೆಯೇ;

ಆ. ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವಂತಹ ಮೀಸಲಾತಿ ವಿವರಗಳೇನು;